# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 533 |
| ಸದಸ್ಯರ ಹೆಸರು | : | ಶ್ರೀ ವೈ.ಎ. ನಾರಾಯಣ ಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 08-12-2023 |
| ಉತ್ತರಿಸುವವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ. | ರಾಜ್ಯದ ಅಂಗನವಾಡಿ ಕೇಂದ್ರುಗಳಲ್ಲಿ ಅಪೌಷ್ಟಿಕತೆಯಿಂದ ಕೂಡಿರುವ ಮಕ್ಕಳ ಸಂಖ್ಯೆ ಎಷ್ಟು ಹಾಗೂ ಈ ಮಕ್ಕಳಲ್ಲಿನ ಅಪೌಷ್ಟಿಕತೆ ನಿವಾರಣೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ಅಂಗನವಾಡಿ ಕೇಂದ್ರುಗಳಲ್ಲಿ ದಾಖಲಾಗಿರುವ ಅಪೌಷ್ಟಿಕತೆಯಿಂದ ಕೂಡಿರುವ ಮಕ್ಕಳ ಸಂಖ್ಯೆ: 1,79,001<br><br>ಅಪೌಷ್ಟಿಕತೆ ನಿವಾರಣೆಗಾಗಿ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ:<br><br>➢ ಎಲ್ಲಾ ಮಕ್ಕಳಿಗೆ ಅಂಗನವಾಡಿ ಕೇಂದ್ರುದಲ್ಲಿ ಪ್ರತಿ ದಿನ ರೂ.8.00 ಮೌಲ್ಯದ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ.<br><br>➢ ತೀವ್ರ ಅಪೌಷ್ಠಿಕ ಮಕ್ಕಳಿಗೆ ಪ್ರತಿ ದಿನ ರೂ.12.00 ಮೌಲ್ಯದ ಪೂರಕ ಪೌಷ್ಠಿಕ ಆಹಾರವನ್ನು ನೀಡಲಾಗುತ್ತಿದೆ.<br><br>➢ ಕೀರಭಾಗ್ಯ ಯೋಜನೆಯಡಿ 06 ತಿಂಗಳಿಂದ 06 ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ 05 ದಿನ 150 ಮಿ.ಲಿ ಕೆನೆಭರಿತ ಹಾಲು ನೀಡಲಾಗುತ್ತಿದೆ.<br><br>➢ 06 ತಿಂಗಳಿನಿಂದ 06 ವರ್ಷದ ತೀವ್ರ ಮತ್ತು ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 03 ದಿನ ಕ್ಷೀರಭಾಗ್ಯ ಯೋಜನೆಯಡಿ ಕೆನೆಭರಿತ ಹಾಲನ್ನು (ದಿನಕ್ಕೆ 20 ಗ್ರಾಂ) ಹೆಚ್ಚುವರಿಯಾಗಿ ಮನೆಗೆ ವಿತರಿಸಲಾಗುತ್ತಿದೆ.<br><br>➢ ಸೃಷ್ಟಿ ಯೋಜನೆಯಡಿ 03 ರಿಂದ 06 ವರ್ಷದ ಎಲ್ಲಾ ಮಕ್ಕಳಿಗೆ ವಾರದಲ್ಲಿ 02 ದಿನ ಮೊಟ್ಟೆ ನೀಡಲಾಗುತ್ತಿದೆ.<br><br>➢ 06 ತಿಂಗಳಿನಿಂದ 03 ವರ್ಷದ ತೀವ್ರ ಮತ್ತು ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 03 ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ. ಮೊಟ್ಟೆ ಸೇವಿಸದ ಮಕ್ಕಳಿಗೆ ವಾರದಲ್ಲಿ 06 ದಿನ ಹಾಲನ್ನುನೀಡಲಾಗುತ್ತಿದೆ<br><br>➢ 03 ರಿಂದ 06 ವರ್ಷದ ತೀವ್ರ ಮತ್ತು ಸಾಧಾರಣ ಅಪೌಷ್ಟಿಕ ಮಕ್ಕಳಿಗೆ ವಾರದಲ್ಲಿ 05ದಿನ ಮೊಟ್ಟೆಯನ್ನು ನೀಡಲಾಗುತ್ತಿದೆ. ಮೊಟ್ಟೆ ಸೇವಿಸದ ಮಕ್ಕಳಿಗೆ ವಾರದಲ್ಲಿ 06 ದಿನ ಹಾಲನ್ನು ನೀಡಲಾಗುತ್ತಿದೆ. |

| | | |
|---|---|---|
| | | ➢ ತೀವ್ರ ಅಪೌಷ್ಟಿಕ ಮಕ್ಕಳಿಗೆ ಆರೋಗ್ಯ ಇಲಾಖೆಯ ಪೌಷ್ಟಿಕ ಪುನರ್ವಸತಿ ಕೇಂದ್ರ (NRC)ಗಳಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.<br><br>➢ ಅಂಗನವಾಡಿ ಕೇಂದ್ರಗಳಲ್ಲಿ ಎಲ್ಲಾ ಮಕ್ಕಳ ಆರೋಗ್ಯ ತಪಾಸಣೆಯನ್ನು 3 ತಿಂಗಳಿಗೊಮ್ಮೆ ನಡೆಸಲಾಗುತ್ತಿದೆ. |
| ಆ. | ಕರ್ನಾಟಕ ರಾಜ್ಯದಲ್ಲಿ ಬಾಣಂತಿಯರು ಹಾಗೂ ಗರ್ಭಿಯರಲ್ಲಿ ಪೌಷ್ಟಿಕತೆಯನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು) | ಬಾಣಂತಿಯರ ಹಾಗೂ ಗರ್ಭಿಣಿಯರಲ್ಲಿ ಪೌಷ್ಟಿಕತೆಯನ್ನು ಹೆಚ್ಚಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ:<br><br>➢ ಪೂರಕ ಪೌಷ್ಟಿಕ ಆಹಾರದ ಕಾರ್ಯಕ್ರಮದಡಿ ಗರ್ಭಿಣಿ ಹಾಗೂ ಬಾಣಂತಿಯರಿಗೆ 600 ಕ್ಯಾಲೋರಿ, 20 ಗ್ರಾಂ ಪ್ರೋಟಿನ್‌ಯುಕ್ತ ಪೌಷ್ಟಿಕ ಆಹಾರವನ್ನು, ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ 300 ದಿನಗಳ ಅವಧಿಗೆ ನೀಡಲಾಗುತ್ತಿದೆ.<br>ಮಾತೃಪೂರ್ಣ ಯೋಜನೆಯಡಿಯಲ್ಲಿ ಗರ್ಭಿಣಿ ಮತ್ತು ಬಾಣಂತಿಯರಿಗೆ ಪೌಷ್ಟಿಕಾಂಶಯುಕ್ತ ಮಧ್ಯಾಹ್ನದ ಬಿಸಿಯೂಟವನ್ನು ಅಂಗನವಾಡಿ ಕೇಂದ್ರದಲ್ಲಿಯೇ ನೀಡುವ "ಮಾತೃಪೂರ್ಣ" ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.<br>ಈ ಪೂರ್ಣ ಊಟದಲ್ಲಿ ಅನ್ನ, ಸಾಂಬಾರ್, ಪಲ್ಯದ ಜೊತೆಗೆ ಬೇಯಿಸಿದ ಮೊಟ್ಟೆ, 200 ಮಿ.ಲೀ ಹಾಲು ಮತ್ತು ಚಿಕ್ಕಿಯನ್ನು ತಿಂಗಳಿಗೆ ಕನಿಷ್ಠ 25 ದಿನಗಳು ನೀಡಲಾಗುತ್ತಿದೆ.<br><br>ದಕ್ಷಿಣ ಕನ್ನಡ, ಉತ್ತರ ಕನ್ನಡ, ಉಡುಪಿ, ಕೊಡಗು, ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳ ಗುಡ್ಡಗಾಡು ಪ್ರದೇಶಗಳಲ್ಲಿನ ಮಾತೃಪೂರ್ಣ ಯೋಜನೆಯಡಿಯ ಫಲಾನುಭವಿ ಗರ್ಭಿಣಿ ಮತ್ತು ಬಾಣಂತಿಯರಲ್ಲಿ ಯಾರಿಗಾದರೂ ಅಂಗನವಾಡಿ ಕೇಂದ್ರಗಳಿಗೆ ಬಂದು ಹೋಗಲು ಅನಾನುಕೂಲತೆ ಇದ್ದಲ್ಲಿ ಅವರ ಮನವಿಯ ಮೇರೆಗೆ ಕಚ್ಚಾ ಆಹಾರ ಪದಾರ್ಥಗಳನ್ನು (Take Home Ration) ಮನೆಗೆ ತೆಗೆದುಕೊಂಡು ಹೋಗಲು ಅವಕಾಶ ನೀಡಲಾಗಿದೆ.<br>ಪ್ರತಿ ಫಲಾನುಭವಿಗೆ ಪ್ರತಿ ದಿನಕ್ಕೆ ರೂ.21/-ರ (ರೂ.9.50/- ಸೇರಿದಂತೆ) ಘಟಕ ವೆಚ್ಚವನ್ನು ನಿಗದಿಪಡಿಸಲಾಗಿದೆ. ಕಬ್ಬಿಣಾಂಶ ಹಾಗೂ ಕ್ಯಾಲ್ಸಿಯಂ ಮಾತ್ರೆ ಸೇವನೆಗೆ ಬೆಂಬಲ ಹಾಗೂ ಪ್ರತಿ ತಿಂಗಳು ಗರ್ಭಿಣಿಯರು ತೂಕವನ್ನು ಪರಿಶೀಲಿಸಲಾಗುತ್ತಿದೆ.<br><br>ಆರೋಗ್ಯ ಮತ್ತು ಪೌಷ್ಟಿಕ ಶಿಬಿರಗಳನ್ನು ಏರ್ಪಡಿಸಿ ಅಧಿಕ ಪೌಷ್ಟಿಕತೆಯುಳ್ಳ ಆಹಾರಗಳನ್ನು ತಯಾರಿಸುವ ಕುರಿತು ಮತ್ತು ಮಕ್ಕಳಿಗೆ ಪೌಷ್ಟಿಕತೆಯುಳ್ಳ ಆಹಾರವನ್ನು ನೀಡಲು ತಿಳುವಳಿಕೆ ನೀಡಲಾಗುತ್ತಿದೆ. |

ಪ್ರಶ್ನೆಸಂಖ್ಯೆ-533 ಅನುಬಂಧ

ಕಳೆದ 3 ವರ್ಷಗಳ ರಾಜ್ಯದಲ್ಲಿ ತೀವ್ರತರ ರಕ್ತಹೀನತೆಯಿಂದ ಮರಣ ಹೊಂದಿದ ಗರ್ಭಿಣಿಯರ ಹಾಗೂ ಬಾಣಂತಿಯರ ವಿವರ

| Sl NO | District | Taluka | FY 2020-21 | FY 2021-22 | FY 2022-23 |
|---|---|---|---|---|---|
| 1 | Bagalkote | Bagalkote | 1 | 0 | 0 |
| 2 | Bagalkote | Hungund | 1 | 0 | 0 |
| 3 | Ballari | Ballari | 2 | 1 | 1 |
| 4 | Ballari | Kampli | 0 | 1 | 0 |
| 5 | Ballari | Kurugodu | 0 | 1 | 0 |
| 6 | Ballari | Sanduru | 0 | 0 | 2 |
| 7 | Belagavi | Belagavi | 0 | 1 | 0 |
| 8 | Belagavi | Gokak | 2 | 0 | 2 |
| 9 | Belagavi | Hukkeri | 1 | 1 | 1 |
| 10 | Bengaluru Rural | Nelamangala | 0 | 0 | 1 |
| 11 | Bengaluru Urban | Anekal | 0 | 0 | 1 |
| 12 | Bengaluru Urban | Bangalore | 0 | 0 | 1 |
| 13 | Bengaluru Urban | East | 1 | 0 | 0 |
| 14 | Bengaluru Urban | South | 1 | 0 | 4 |
| 15 | Chamarajanagara | Gundlupet | 0 | 1 | 0 |
| 16 | Chikkaballapura | Bagepalli | 1 | 0 | 1 |
| 17 | Chikkaballapura | Chinthamani | 0 | 2 | 0 |
| 18 | Chikkaballapura | Gowribidanuru | 0 | 2 | 2 |
| 19 | Chikkaballapura | Sidlaghatta | 0 | 0 | 1 |
| 20 | Chikmangalure | Kadur | 1 | 0 | 0 |
| 21 | Davangere | Channagiri | 1 | 0 | 0 |
| 22 | Davangere | Davangere | 0 | 2 | 0 |
| 23 | Davangere | Honnali | 1 | 0 | 0 |
| 24 | Davangere | Jagalur | 1 | 0 | 0 |
| 25 | Dharwad | Dharwad | 1 | 0 | 0 |
| 26 | Dharwad | Hubballi | 0 | 0 | 1 |
| 27 | Gadag | Gadag | 1 | 0 | 0 |
| 28 | Hassan | Hassan | 0 | 0 | 1 |
| 29 | Haveri | Ranebennur | 0 | 0 | 1 |
| 30 | Kalaburagi | Afzalapur | 1 | 0 | 1 |
| 31 | Kalaburagi | Alanda | 4 | 1 | 0 |
| 32 | Kalaburagi | Chincholi | 0 | 1 | 2 |
| 33 | Kalaburagi | Chittapur | 1 | 2 | 2 |
| 34 | Kalaburagi | Jewargi | 1 | 0 | 0 |
| 35 | Kalaburagi | Kalaburagi | 2 | 4 | 2 |
| 36 | Kalaburagi | Sedam | 2 | 1 | 0 |
| 37 | Kalaburagi | Surapur | 0 | 0 | 1 |
| 38 | Koppal | Gangavathi | 1 | 0 | 0 |
| 39 | Koppal | Koppal | 0 | 2 | 0 |
| 40 | Koppal | Kushtagi | 1 | 0 | 0 |
| 41 | Mandya | Mandya | 1 | 0 | 0 |
| 42 | Mysuru | Mysuru | 0 | 1 | 1 |
| 43 | Mysuru | Periyapatana | 0 | 1 | 0 |
| 44 | Raichur | Devdurga | 1 | 0 | 1 |
| 45 | Raichur | Lingasagur | 1 | 0 | 0 |
| 46 | Raichur | Manvi | 0 | 0 | 1 |
| 47 | Raichur | Raichur | 1 | 0 | 0 |
| 48 | Ramanagara | Magadi | 0 | 1 | 0 |

| | | | | | |
|---|---|---|---|---|---|
| 49 | Ramanagara | Ramanagara | 0 | 1 | 0 |
| 50 | Shivamogga | Shivamogga | 0 | 3 | 0 |
| 51 | Tumakuru | Madhugiri | 2 | 0 | 0 |
| 52 | Tumakuru | Pavagada | 1 | 1 | 0 |
| 53 | Tumakuru | Tumkuru | 2 | 1 | 0 |
| 54 | Udupi | Udupi | 1 | 0 | 0 |
| 55 | Vijayanagara | Harapanahalli | 2 | 0 | 0 |
| 56 | Vijayanagara | Kudligi | 1 | 1 | 2 |
| 57 | Vijayapura | BasavanBagewadi | 1 | 1 | 0 |
| 58 | Vijayapura | Indi | 0 | 1 | 2 |
| 59 | Vijayapura | Vijayapur | 0 | 1 | 0 |
| 60 | Yadagir | Shahapur | 0 | 0 | 1 |
| 61 | Yadagir | Shorapur | 1 | 0 | 0 |
| 62 | Yadagir | Yadagir | 1 | 0 | 2 |
| | | Grand Total | **45** | **36** | **38** |

| | | |
|---|---|---|
| | | ➢ 6 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಮತ್ತು ಗರ್ಭಿಣಿಯರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ನಿಗದಿತ ಚುಚ್ಚುಮದ್ದನ್ನು ನೀಡಲಾಗುತ್ತಿದೆ.<br>➢ ಪ್ರತಿ ತಿಂಗಳು ನಡೆಸುವ ತಾಯಂದಿರ ಸಭೆಗಳಲ್ಲಿ ಅಪೌಷ್ಠಿಕತೆ ನಿವಾರಣೆ ಬಗ್ಗೆ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ತಾಯಂದಿರುಗಳಿಗೆ ತಿಳುವಳಿಕೆ ನೀಡಲಾಗುತ್ತಿದೆ.<br>➢ ಪೋಷಣ್ ಅಭಿಯಾನ ಯೋಜನೆಯಡಿ ಪ್ರತಿ ತಿಂಗಳು ಎರಡು ಬಾರಿ ಸಮುದಾಯ ಆಧಾರಿತ ಚಟುವಟಿಕೆಗಳನ್ನು ನಡೆಸಲಾಗುತ್ತಿದ್ದು, ತಾಯಂದಿಯರಿಗೆ ಅಪೌಷ್ಠಿಕತೆ ಬಗ್ಗೆ ತಿಳಿಸಲಾಗುತ್ತಿದೆ. |
| ಇ. | ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಬಾಣಂತಿಯರು ಹಾಗೂ ಗರ್ಭಿಣಿಯರಲ್ಲಿ ಅಪೌಷ್ಠಿಕತೆಯಿಂದ ಮರಣ ಹೊಂದಿದ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು) | ಗರ್ಭಿಣಿ ಮತ್ತು ಬಾಣಂತಿಯರಲ್ಲಿ ಉಂಟಾಗುವ ಮರಣಗಳಿಗೆ ನೇರ ಕಾರಣ ಮತ್ತು ಪರೋಕ್ಷ ಕಾರಣಗಳಿರುತ್ತವೆ.<br>**ನೇರ ಕಾರಣಗಳು:** ಪ್ರಸವೋತ್ತರ ರಕ್ತಸ್ರಾವ, ಅಧಿಕ ರಕ್ತದೊತ್ತಡ, ಪ್ರಸವದ ಅಡೆತಡೆಗಳು, ಬಾಣಂತಿಯಲ್ಲಿನ ನಂಜು ಮತ್ತು ಗರ್ಭಪಾತಗಳು.<br>**ಪರೋಕ್ಷ ಕಾರಣಗಳು:** ತೀವ್ರತರಹದ ರಕ್ತಹೀನತೆ<br>ಮೇಲಿನ ಕಾರಣಗಳಿಂದ ಕಳೆದ ಮೂರು ವರ್ಷಗಳಲ್ಲಿ ಮರಣ ಹೊಂದಿದ ಬಾಣಂತಿಯರು ಹಾಗೂ ಗರ್ಭಿಣಿಯರ ಸಂಖ್ಯೆ;119 ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಲಾಗಿದೆ. |

**ಸಂಖ್ಯೆ: ಮಮಇ 215 ಐಸಿಡಿ 2023**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.